# ಬೈಲಿಗೆ ಬೈಲಾಗಿತು ಬೈಲೊಳಗೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 415.
2. **Note:** These lyrics are not available in other standard books that I referred.
3. **Note:** The singer has followed the lyrics as in Ref. 1.

ರಾಗ: ಬೇಹಾಗ್ ತಾಳ: ಏಕ

ಬೈಲಿಗೆ ಬೈಲಾಗಿತು ಬೈಲೊಳಗೆ || ಪ ||

ಸೂತ್ರ ಬೊಂಬೆಯು ಮಾಡಿ ಹರಿ ಸೂತ್ರದಿಂ ಕುಣಿಸ್ಯಾಡಿ
ಸೂತ್ರ ಕಡಿಯಿತು ಬೊಂಬೆ ಮುರಿಯಿತು ಆಟ ನಿಂತಿತು ಕೇಳೋ ಮನುಜಾ || ೧ ||

ಚಂದಾಗಿ ಜ್ಯೋತಿಯು ಬೆಳಗಿ ಎಣ್ಣೆಯು ಬತ್ತಿಯು ಹಾಕಿ
ಎಣ್ಣೆ ಮುಗಿಯಿತು ಬತ್ತಿ ಕಡಿಯಿತು ಕತ್ತಲು ಆಯಿತು ಕೇಳೋ ಮನುಜಾ || ೨ ||

ನೆಂಟರಿಷ್ಟರು ಕೂಡಿ, ಅವರು ಸಂತೆಗೋಸ್ಕರವಾಗಿ
ಸಂತೆ ಮುಗಿಯಿತು ಚಿಂತೆ ಹತ್ತಿತು ಭ್ರಾಂತಿ ಆಯಿತು ಕೇಳೋ ಮನುಜಾ || ೩ ||

ಬಾಲೆಯೊಬ್ಬಳು ಕೂಡಿ ಅವಳು ನೀರಿಗೋಸ್ಕರ ಪೋಗಿ
ನೀರು ತುಂಬಿತು ಕಾಲು ಜಾರಿತು ಕೊಡವು ಒಡೆಯಿತು ಕೇಳೋ ಮನುಜಾ || ೪ ||

ಪರಿಪರಿ ವಿಧದಲ್ಲಿ ನಾನು ಪರಮಾತ್ಮನ ಸ್ತುತಿಯು ಮಾಡಿ ಪರಮ
ಮೂರುತಿ ಪುರಂದರ ವಿಠಲನೆ ಕರುಣಿಸೊ ಪಾಲಿಸೊ ಪರಮ ದಯಾಳೋ || ೫ ||

**Classification:** Mundige
**Ankita:** purandara vittala
**Location:** NA
**Category:** Mukti Marga, Bhakti, Jeevanoddhara
**Group Words:** paramatma, nara, bandhu, sante, niru, daya,

**Pravachana:** NA

**Explanation:** NA